**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಹೊಸದುರ್ಗ.**

**ಅಸಲು ದಾವಾ ಸಂಖ್ಯೆ. 233/2022**
**ವಾ.ಸಾ-1**

**ಸಾಕ್ಷಿಗೆ ದಿನಾಂಕಃ 17-7-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು ಶ್ರೀ ಡಿ ಎನ್ ಎಂ ಪ್ರತಿವಾದಿಯರ ಪರ ವಕೀಲರಿಂದ**

1. ಅಸಲು ದಾವೆ ಸಂಖ್ಯೆ 81/2022 ರಲ್ಲಿ ವಕೀಲರನ್ನು ಬದಲಾಯಿಸಿದ ನಂತರ ನನ್ನ ಗಂಡ ವಾದಿ ದಾವೆಯಲ್ಲಿ ನ್ಯಾಯಾಲಯದ ಮುಂದೆ ಹಾಜರಾಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಗಂಡ ವಾದಿ ಕೇಸಿನ ವಿಚಾರವಾಗಿ ನ್ಯಾಯಾಲಯಕ್ಕೆ ಬರುತ್ತಿದ್ದಾರೆ ಎಂದುನನಗೆ ಬೇರೆ ಯಾರೋ ಹೇಳಿದರು. ಈ ಕುರಿತು ನಾನು ವಕೀಲರನ್ನು ಸಂಪರ್ಕಿಸಿ ನನ್ನ ಗಂಡ ಯಾವ ಕಾರಣಕ್ಕೆ ನ್ಯಾಯಾಲಯಕ್ಕೆ ಬರುತ್ತಿದ್ದರೆಂದು ವಿಚಾರಣೆ ಮಾಡಿದ್ದೆನು. ನಂತರ ದಾವೆಯನ್ನು ನಾನು ನಡೆಸುವಂತೆ ಕ್ರಮ ತೆಗೆದುಕೊಂಡಿದ್ದೇನೆ. ಈ ಕಾರಣಕ್ಕಾಗಿಯೇ ನಾನು ಪ್ರಸ್ತುತ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿ.

2. ಈ ಹಿಂದಿನ ದಾವೆಯ ದಾಖಲಾತಿಗಳನ್ನು ನಮ್ಮ ಈಗಿನ ವಕೀಲರು ನ್ಯಾಯಾಲಯದಿಂದ ಪಡೆದುಕೊಂಡಿದ್ದಾರೆ. ನಮ್ಮ ಅತ್ತೆ ಅಸಲು ದಾವೆ ಸಂಖ್ಯೆ 77/2016 ರಂತೆ ನನ್ನ ಗಂಡನ ವಿರುದ್ದ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ಗಂಡ ಹಾಜರಾಗಿ ತಕರಾರು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ವಿಚಾರಣೆಯ ಕಾಲದಲ್ಲಿ ನನ್ನ ಅತ್ತೆ ತೀರಿಕೊಂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಮತ್ತು ನನ್ನ ಗಂಡ ನನ್ನ ಅತ್ತೆಯ ವಾರಸುದಾರರು ಎಂದು ಅರ್ಜಿ ಸಲ್ಲಿಸಿದ್ದೆವು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿ ವಜಾ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

ಅಸಲು ದಾವಾ ಸಂಖ್ಯೆ. 233/2022
ವಾ.ಸಾ-1

3. ನನ್ನ ಗಂಡ ಈಗಲೂ ಕೂಡ ಆರೋಗ್ಯವಾಗಿದ್ದಾರೆ ಮತ್ತು ದೈನಂದಿನ ವ್ಯವಹಾರಗಳ ಬಗ್ಗೆ ತಿಳುವಳಿಕೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಅತ್ತೆಯ ಜೊತೆ ಹೋಗಿ ಬರುತ್ತಿದ್ದರು ಎಂದು ನುಡಿಯುವರು. ನನ್ನ ಗಂಡ ವಾದಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿದ್ದೇನೆ. ಸಾಕ್ಷಿಯು ಮುಂದುವರೆದು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದೇನೆ. ಈ ಕುರಿತು ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ಈ ದಾವೆಯನ್ನು ಹೂಡುವ ಮೊದಲು ನನ್ನ ಗಂಡ ಮಾನಸಿಕ ಅಸ್ವಸ್ಥನೆಂದು ಆತನ ಪಾಲನ ಕರ್ತ ಎಂದು ನ್ಯಾಯಾಲಯದಿಂದ ಆದೇಶ ಪಡೆದುಕೊಂಡಿಲ್ಲ. ಸಾಕ್ಷಿಯು ಮುಂದುವರೆದು ಈ ಕುರಿತು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುವರು. ಸದರಿ ಅರ್ಜಿಯ ಕುರಿತು ದಾಖಲಾತಿಗಳನ್ನು ಹಾಜರುಪಡಿಸಿರುವ ಬಗ್ಗೆನನಗೆ ಗೊತ್ತಿಲ್ಲ.

4. ದಿನಾಂಕ 15-12-2020 ರಂದು ನಾನು ಮತ್ತು ನನ್ನ ಗಂಡ ಒಂದು ಖರೀದಿ ಕರಾರು ಪತ್ರವನ್ನು ಮಾಡಿಕೊಟ್ಟಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಗಂಡನ ವೈದ್ಯಕೀಯ ಚಿಕಿತ್ಸೆಗೆ ಹಣದ ಅವಶ್ಯಕತೆ ಇತ್ತು ಆದ್ದರಿಂದ ಕರಾಪತ್ರ ಮಾಡಿಕೊಟ್ಟಿದ್ದೇವೆ ಎಂದು ನುಡಿಯುವರು. ಸದರಿ ಕರಾರುಪತ್ರದಲ್ಲಿ ಸದರಿ ವಿಚಾರವನ್ನು ಬರೆಸಿಲ್ಲ. ಸದರಿ ಕರಾರನ್ನು ಮಾಡಿಕೊಡುವ ಕಾಲದಲ್ಲಿ ನನ್ನ ಗಂಡ ವಾದಿಯು ಆರೋಗ್ಯವಂತನಾಗಿದ್ದು ಅವರೇ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನೇ ಕರೆದುಕೊಂಡು ಹೋಗಿದ್ದೆ ಎಂದು ನುಡಿಯುವರು. ನನ್ನ ಗಂಡ ಆರೋಗ್ಯವಂತನಾಗಿರುವ ವಿಷಯ ನನಗೆ ತಿಳಿದಿದ್ದರೂ ಕೂಡ ಸತ್ಯಾಂಶವನ್ನು

**ಅಸಲು ದಾವಾ ಸಂಖ್ಯೆ. 233/2022**
**ವಾ.ಸಾ-1**

ಮರೆಮಾಚಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ. ನನ್ನ ಸಮಕ್ಷಮ

ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.